2017 ಕ.ತೀ.ವ 1127

(ಧಾರವಾಡ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ

ರಿಲಯನ್ಸ್ ಜನರಲ್ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ–
ಶ್ರೀ ರಾಮಪ್ಪ ಮತ್ತು ಇನ್ನೊಬ್ಬರು*

ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923ರ 30(1)ನೇ ಪ್ರಕರಣದಡಿಯಲ್ಲಿನ ನಿಯತ ಮೊದಲ ಅಪೀಲು.

ಮೋಟಾರು ವಾಹನಗಳ ನಿಯಮಗಳು, 1989.

ಮೋಟಾರು ವಾಹನಗಳ ಅಧಿನಿಯಮ, 3, 4, 5, 149(2)(ಎ)(ಐ), 166 ಪ್ರಕರಣಗಳು.

ಡಬ್ಲ್ಯೂ.ಸಿ.ಎ. ಎನ್‌ಎಫ್ ಸಂ.46/2008 ಮತ್ತು ಡಬ್ಲ್ಯೂ.ಸಿ.ಎ. ಎನ್‌ಎಫ್ ಸಂ.47/2008 ರಲ್ಲಿ ಕಾರ್ಮಿಕಾಧಿಕಾರಿ ಆಯುಕ್ತರು (ಸಂಕ್ಷಿಪ್ತವಾಗಿ ಆಯುಕ್ತರು) ಮತ್ತು ಕಾರ್ಮಿಕರ ನಷ್ಟ ಪರಿಹಾರ, ಬಾಗಲಕೋಟೆ ಇವರು ದಿನಾಂಕ 31.12.2009 ರಂದು ಹೊರಡಿಸಿದ ಸಾಮಾನ್ಯ ತೀರ್ಪು ಮತ್ತು ನಷ್ಟ ಪರಿಹಾರದ ವಿರುದ್ಧ ಈ ಎರಡು ಅಪೀಲುಗಳನ್ನು ಸಲ್ಲಿಸಲಾಗಿದೆ.

ಸಂ.ಕೆಎ.29/8190 ರಲ್ಲಿ ನೋಂದಾಯಿತವಾಗಿರುವ ಟೆಂಪೋ ಟ್ರಾಕ್ಸ್ ಜೀಪ್ ವಾಹನ ದಿನಾಂಕ 02.12.2007 ರಂದು ಅಪಘಾತಕ್ಕೆ ಒಳಗಾಗಿ ಅದರಲ್ಲಿದ್ದ ಕಾರ್ಮಿಕರು ಗಾಯಗೊಂಡು ಬಾಧಿತರಾದ ಸಂಬಂಧದಲ್ಲಿ ಆಯುಕ್ತರ ಮುಂದೆ ಕಾರ್ಮಿಕರು ಕ್ಲೇಮು ಅರ್ಜಿಯನ್ನು ದಾಖಲಿಸಿರುವರು.

*ಎಂ.ಎಫ್.ಎ.ಸಂ: 21220/2010 (ಡಬ್ಲ್ಯೂಸಿ) ಇದರೊಂದಿಗೆ ಇತರೆ, ದಿನಾಂಕ: 1ನೇ ಜುಲೈ, 2016.

ಅಪಘಾತ ನಡೆದು ಅಪರಾಧಕ್ಕೆ ಗುರಿಯಾದ ವಾಹನದ ಕ್ಲೇಮುದಾರರು ಮತ್ತು ಮಾಲೀಕರ ನಡುವೆ ಕೆಲಸಗಾರರ ಮತ್ತು ಉದ್ಯೋಗದಾತನ ಸಂಬಂಧವನ್ನು ವಿಮಾಕರ್ತನು ವಿವಾದಗೊಳಿಸಿರುವನು. ಅಪಘಾತದ ಸಂಭವನೀಯತೆಯನ್ನು, ಗಾಯಗಳಿಂದ ಬಾಧಿತನಾಗಿರುವುದನ್ನು, ಕ್ಲೇಮುದಾರರು/ಕೆಲಸಗಾರರು ಭರಿಸಿದ ವೆಚ್ಚಗಳು ಸಹ ವಿವಾದಕ್ಕೆ ಗುರಿಯಾಗಿರುತ್ತದೆ. ಅದು ನಿರ್ದಿಷ್ಟವಾಗಿ ವಾಹನ ಚಾಲಕನು ವಾಹನ ಚಲಾಯಿಸುವುದಕ್ಕೆ ಸಮರ್ಥವಾದ ಮತ್ತು ಸಿಂಧುವಾದ ಚಾಲನಾ ಲೈಸೆನ್ಸ್ ಹೊಂದಿಲ್ಲದಿರುವುದನ್ನು ಆಗ್ರಹಪಡಿಸಿದ್ದಾರೆ.

ಮೂರು ಜನರಿಗೆ ಮಾತ್ರವೇ ಸ್ಥಳವಕಾಶವಿರುವ ವಾಹನದಲ್ಲಿ ವಾಹನದ ಕೆಲಸಗಾರರ ಸಂಭವನೀಯ ಅಪಾಯವನ್ನು ಪ್ರಶ್ನಿತ ವಿಮಾಪಾಲಿಸಿ ಒಳಗೊಂಡಿರುವುದಿಲ್ಲ. ಚಾಲಕ ಅಥವಾ ಇತರ ನೌಕರರೂ ಹೊಣೆಗಾರಿಕೆಯ ವಿಮೆಯ ಕಂತುಗಳನ್ನು ಸಂಗ್ರಹ ಮಾಡಿರುವುದಿಲ್ಲ. ಸಂಗ್ರಹಿಸಿರುವುದಿಲ್ಲ. ಇಲ್ಲಿ ಕ್ಲೇಮುದಾರನಾಗಿರುವ ಚಾಲಕನ ಮೇಲೆ ಪ್ರಾಸಿಕ್ಯೂಷನ್ ಅವರು ಅಪಘಾತ ಕಾರಣಕ್ಕಾಗಿ ಚಾಲಕನ ಅತಿ ವೇಗ ಮತ್ತು ನಿರ್ಲಕ್ಷ್ಯತೆಯ ಚಾಲನೆಯಿಂದ ಅಪಘಾತ ಸಂಭವಿಸಿತೆಂದು ಆಪಾದಿಸಿರುವರು. ಮೋಟಾರು ವಾಹನಗಳ ಅಧಿನಿಯಮ (ಸಂಕ್ಷಿಪ್ತವಾಗಿ ಅಧಿನಿಯಮ)ದ 3ನೇ ಪ್ರಕರಣದ ಅಡಿಯಲ್ಲಿ ಪರಿಣಾಮಕಾರಿ ಚಾಲನಾ ಲೈಸೆನ್ಸ್ ಹೊಂದಿರುವುದು ಅತ್ಯಾವಶ್ಯವಾಗಿದೆ ಎಂದು ನಿರೂಪಿಸಿದೆ. ಸದರಿ ವಾಹನವನ್ನು ಚಲಾಯಿಸುವುದಕ್ಕೆ ನಿರ್ದಿಷ್ಟವಾಗಿ ಜಾರಿ ಮಾಡಿದ ಲೈಸೆನ್ಸ್ ಹೊರತುಪಡಿಸಿ ಯಾರೊಬ್ಬರೂ ಈ ಸಾಗಣೆ ವಾಹನವನ್ನು ಚಲಾಯಿಸಲು ಹಕ್ಕನ್ನು ಹೊಂದಿರುವುದಿಲ್ಲ. ಮೋಟಾರು ವಾಹನಗಳ ಅಧಿನಿಯಮದ 4ನೇ ಪ್ರಕರಣವು ಈ ಮೋಟಾರು ವಾಹನದ ಚಾಲನೆಗೆ ಸಂಬಂಧಿಸಿದಂತೆ ವಯಸ್ಸಿನ ನಿರ್ಬಂಧತೆಯನ್ನು ನಿರೂಪಿಸಿದೆ. ಮೋಟಾರು ವಾಹನ ಅಧಿನಿಯಮದ 5ನೇ ಪ್ರಕರಣದಲ್ಲಿ ಈ ಅಧಿನಿಯಮದ 3ನೇ ಮತ್ತು 4ನೇ ಪ್ರಕರಣದ ಉಪಬಂಧಗಳನ್ನು ತೃಪ್ತಿಕರವಾಗಿ ಹೊಂದಿಲ್ಲದ ಯಾರೇ ವ್ಯಕ್ತಿಗೆ ಮೋಟಾರು ವಾಹನವನ್ನು ಚಲಾಯಿಸುವುದಕ್ಕೆ ಅನುಮತಿಸುವ ವಾಹನದ ಮಾಲೀಕ ಅಥವಾ ವಾಹನದ ಪ್ರಭಾರ ಹೊಂದಿರುವ ವ್ಯಕ್ತಿಯೇ ಹೊಣೆಗಾರನಾಗಿರುತ್ತಾನೆಂದು ಸೂಚಿಸಿದೆ. ವಿಮಾ ಪಾಲಿಸಿಯ ಷರತ್ತುಗಳಲ್ಲಿ ಇದು ಸಹ ಒಂದಾಗಿದೆ, . . . . . ವಾಹನ ಚಲಾಯಿಸುವ ವ್ಯಕ್ತಿಯು ಅಪಘಾತ ನಡೆದ ಸಮಯದಲ್ಲಿ ಪರಿಣಾಮಕಾರಿ ಚಾಲನಾ ಲೈಸೆನ್ಸ್ ಹೊಂದಿರಬೇಕು

ಮತ್ತು ಅಂಥ ಲೈಸೆನ್ಸ್ ಹೊಂದುವುದರಿಂದ ಅಥವಾ ಪಡೆದುಕೊಳ್ಳುವುದರಿಂದ ಅವನು ಅನರ್ಹನಾಗಿರಬಾರದು.

ತದನುಸಾರವಾಗಿ, ಚಾಲಕನು ಟೆಂಪೋ ಟ್ರಕ್ಸ್/ಸಾಗಣೆ ವಾಹನವನ್ನು ಚಲಾಯಿಸುವುದಕ್ಕೆ ಸಿಂಧುವಾದ ಮತ್ತು ಪರಿಣಾಮಕಾರಿ ಲೈಸೆನ್ಸ್ ಅನ್ನು ಹೊಂದಿಲ್ಲದಿರುವುದು ಮತ್ತು ವಾಹನದ ಮಾಲೀಕ ಮೋಟಾರು ವಾಹನ ಅಧಿನಿಯಮದ 5ನೇ ಪ್ರಕರಣವನ್ನು ಉಲ್ಲಂಘಿಸಿರುವ ಕೃತ್ಯ ಮತ್ತು ವಿಮಾ ಪಾಲಿಸಿಯ ಅಡಿಯಲ್ಲಿನ ಕರಾರು ಷರತ್ತುಗಳನ್ನು ಉಲ್ಲಂಘಿಸಿರುವ ಕೃತ್ಯವು ಸ್ಪಷ್ಟವಾಗಿದೆ.

ಪಾಲಿಸಿಯ ಷರತ್ತನ್ನು ಉಲ್ಲಂಘಿಸಿದ ಕಾರಣದ ಮೇಲೆ ಮಾಲೀಕನು ನಷ್ಟ ಭರ್ತಿಗೆ ಹೊಣೆಗಾರನಾಗಬೇಕೆಂದು ಅಪೀಲುದಾರರು ಎತ್ತಿರುವ ಪ್ರಶ್ನೆಯು ಸರಿಯಾಗಿರುತ್ತದೆ. ಪಾಲಿಸಿಯಲ್ಲಿ ಸಂಭವನೀಯ ಅಪಾಯವನ್ನು ಒಳಗೊಂಡಿರುವ ಕೆಲಸಗಾರ ಇಲ್ಲಿ ಮೂರನೇ ಪಕ್ಷಕಾರನಲ್ಲ. ಒಂದನೆಯದಾಗಿ, ಪಾಲಿಸಿ ಷರತ್ತುಗಳ ಉಲ್ಲಂಘನೆ, ಮತ್ತು ಎರಡನೆಯದಾಗಿ, ಚಾಲಕ ಮತ್ತು ನೌಕರನ ಸಂಬಂಧದಲ್ಲಿ ಕಂತುಗಳನ್ನು ಸಂಗ್ರಹಿಸಿರುವುದಿಲ್ಲ. ಈ ಕಾರಣಗಳಿಂದ ಅಪೀಲುದಾರ ಇಬ್ಬರ ನಷ್ಟ ಪರಿಹಾರವನ್ನು ನೀಡುವುದಕ್ಕೆ ಹೊಣೆಗಾರನಾಗಿರುವುದಿಲ್ಲ.

ಮೇಲಿನ ಚರ್ಚೆಗೆ ಅನುಗುಣವಾಗಿ, ಎರಡು ಅಪೀಲುಗಳನ್ನು ಪುರಸ್ಕರಿಸಲಾಗಿದೆ. ಅಪೀಲುದಾರ–ವಿಮಾಕರ್ತನನ್ನು ಎರಡೂ ಅಪೀಲುಗಳಲ್ಲಿ ಕ್ಲೇಮುದಾರರಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ವಿಮಾ ಒಪ್ಪಂದದ ಅಡಿಯಲ್ಲಿ ಹೊಣೆಯಾಗಿರುವುದರಿಂದ ಮುಕ್ತಗೊಳಿಸಲಾಗಿದೆ ಎಂದು ಅಭಿಪ್ರಾಯಪಟ್ಟು ಸದರಿ ಅಪೀಲುಗಳನ್ನು ಅಂಗೀಕರಿಸಿದೆ.

| *ಉಲ್ಲೇಖಿಸಲಾದ ಮೊಕದ್ದಮೆ* | *ಪ್ಯಾರಾದಲ್ಲಿ* |
|---|---|

*1. 2004(2) ಕರ್ನಾಟಕ ಕಾನೂನು ತೀರ್ಪು 569 (ಎಫ್‌ಬಿ)*
*ಶ್ರೀಮತಿ ಕವಿತ ದಿಲೀಪ್ ಪಾಟೀಲ್ ಮತ್ತು ಇತರರು*
*–ವಿರುದ್ಧ– ಆನಂದ ಜ್ಞಾನು ಪಾಟೀಲ್ ಮತ್ತು ಇನ್ನೊಬ್ಬರು (ಉಲ್ಲೇ) 9*

ಅರ್ಜಿದಾರರ ಪರವಾಗಿ: ಶ್ರೀ ಜಿ.ಎನ್. ರಾಯಚೂರ್, ವಕೀಲರು.

## ತೀರ್ಪು

**ನ್ಯಾಯಮೂರ್ತಿ ಶ್ರೀಮತಿ ರತ್ನಕಲಾ:**

ಡಬ್ಲ್ಯೂ.ಸಿ.ಎ. ಎನ್ಎಫ್ ಸಂ.46/2008 ಮತ್ತು ಡಬ್ಲ್ಯೂ.ಸಿ.ಎ. ಎನ್ಎಫ್ ಸಂ.47/2008 ರಲ್ಲಿ ಕಾರ್ಮಿಕಾಧಿಕಾರಿ ಮತ್ತು ಆಯುಕ್ತರು ಕಾರ್ಮಿಕರ ನಷ್ಟ ಪರಿಹಾರ, ಬಾಗಲಕೋಟೆ (ಸಂಕ್ಷಿಪ್ತವಾಗಿ ಆಯುಕ್ತರು) ಇವರು ದಿನಾಂಕ 31.12.2009 ರಂದು ಹೊರಡಿಸಿದ ಸಾಮಾನ್ಯ ತೀರ್ಪು ಮತ್ತು ನಷ್ಟ ಪರಿಹಾರದ ವಿರುದ್ಧ ಈ ಎರಡು ಅಪೀಲುಗಳನ್ನು ಸಲ್ಲಿಸಲಾಗಿದೆ.

2. ಸಂ.ಕೆಎ.29/8190 ರಲ್ಲಿ ನೋಂದಾಯಿತವಾಗಿರುವ ಟೆಂಪೋ ಟ್ರಾಕ್ಸ್ ಜೀಪ್ ವಾಹನ ದಿನಾಂಕ 02.12.2007 ರಂದು ಅಪಘಾತಕ್ಕೆ ಒಳಗಾಗಿ ಅದರಲ್ಲಿದ್ದ ಕಾರ್ಮಿಕರು ಗಾಯಗೊಂಡು ಬಾಧಿತರಾದ ಸಂಬಂಧದಲ್ಲಿ ಆಯುಕ್ತರ ಮುಂದೆ ಕಾರ್ಮಿಕರು ಕ್ಲೇಮು ಅರ್ಜಿಯನ್ನು ದಾಖಲಿಸಿರುವರು.

3. ಕ್ಲೇಮುದಾರರು, ಆಯುಕ್ತರ ಮುಂದೆ ಸಲ್ಲಿಸಲಾದ ಮೊಕದ್ದಮೆಯೆಂದರೆ ಸಂಖ್ಯೆ.ಕೆಎ –29/8190ರಲ್ಲಿ ನೋಂದಾಯಿತವಾಗಿರುವ ಟೆಂಪೋ ಟ್ರಕ್ಸ್‌ನಲ್ಲಿನ ಕ್ಲೀನರ್ ಮತ್ತು ಚಾಲಕನಾಗಿ ಅನುಕ್ರಮವಾಗಿ ತಾವು ನಿಯೋಜಿತಗೊಂಡವರಾಗಿದ್ದು ತಮ್ಮ ಉದ್ಯೋಗದಾತನು ಇದರಲ್ಲಿನ ಪ್ರತ್ಯರ್ಜಿದಾರ ಸಂಖ್ಯೆ.2 ಆಗಿದ್ದಾನೆಂಬುದಾಗಿದೆ. ಸದರಿ ವಾಹನ ದಿನಾಂಕ 02.12.2007 ರಂದು ಬಾಗಲಕೋಟೆಯ ಕಡೆಗೆ ಬರುತ್ತಿರುವಾಗ ಕೆರೂರ್‌ನ ಚೊರಗಸ್ತಿ ಅಡ್ಡ ಹತ್ತಿರ ಅಪಘಾತಕ್ಕೆ ಒಳಗಾಯಿತು. ಇದರ ಪರಿಣಾಮ, ವಾಹನದಲ್ಲಿದ್ದ ಕಾರ್ಮಿಕರು ಮೂಳೆ ಮುರಿತದಂತಹ ಗಾಯಗಳಿಂದ ಬಾಧಿತರಾದರು. ಅವರು ಖಾಸಗೀ ಆಸ್ಪತ್ರೆಯಲ್ಲಿ ಒಳರೋಗಿಗಳಾಗಿ ಚಿಕಿತ್ಸೆಯನ್ನು ಪಡೆದಿರುತ್ತಾರೆ. ಅಪಘಾತದಲ್ಲಿ ಉಂಟಾದ ಗಾಯಗಳಿಂದಾಗಿ ಅವರು ಸೂಕ್ತವಾಗಿ ಕೆಲಸ ಮಾಡಲು ಅಸಮರ್ಥರಾಗಿರುತ್ತಾರೆ. ಅವರಿಬ್ಬರೂ, ಅನುಕ್ರಮವಾಗಿ 35 ಮತ್ತು 40 ವರ್ಷಗಳ ವಯಸ್ಸಿನವರಾಗಿರುವರು. ಕೆಲಸಗಾರನಾದ ಕ್ಲೀನರ್

ತಿಂಗಳ ಸಂಬಳವಾಗಿ 4,000/- ರೂ.ಗಳನ್ನು ಮತ್ತು ಪ್ರತಿ ದಿನ ಬಾಟದಂತೆ 50 ರೂ.ಗಳನ್ನು ಸಂಪಾದಿಸುತ್ತಿದ್ದ. ಕೆಲಸಗಾರನಾದ ಡ್ರೈವರ್ ತಿಂಗಳ ಸಂಬಳವಾಗಿ 5,000/- ರೂ.ಗಳನ್ನು ಮತ್ತು ಪ್ರತಿದಿನ 50/- ರೂ.ಗಳ ಬಾಟವನ್ನು ಸಂಪಾದಿಸುತ್ತಿದ್ದ. ಆದುದರಿಂದ ವಿಮಾಕರ್ತನಿಂದ ಅವರಿಬ್ಬರೂ ಪ್ರತಿಯೊಬ್ಬರಿಗೂ 3,50,000/- ರೂ.ಗಳ ನಷ್ಟ ಪರಿಹಾರವನ್ನು ಕ್ಲೇಮು ಮಾಡಿರುವರು. ಆಯುಕ್ತರ ನೋಟೀಸಿಗೆ ಪ್ರತ್ಯುತ್ತರವಾಗಿ, ಆಯುಕ್ತರ ಮುಂದೆ ಮಾಲೀಕ ಮತ್ತು ವಿಮಾಕರ್ತ ಹಾಜರಾಗಿರುವರು, ಕ್ಲೇಮು ಅರ್ಜಿಗೆ ವಿಮಾಕರ್ತ ಮಾತ್ರವೇ ಆಕ್ಷೇಪಣೆ ಹೇಳಿಕೆಗಳನ್ನು ದಾಖಲಿಸಿರುವನು.

4. ಅಪಘಾತ ನಡೆದು ಅಪರಾಧಕ್ಕೆ ಗುರಿಯಾದ ವಾಹನದ ಕ್ಲೇಮುದಾರರು ಮತ್ತು ಮಾಲೀಕರ ನಡುವೆ ಕೆಲಸಗಾರರ ಮತ್ತು ಉದ್ಯೋಗದಾತನ ಸಂಬಂಧವನ್ನು ವಿಮಾಕರ್ತನು ವಿವಾದಗೊಳಿಸಿರುವನು. ಅಪಘಾತದ ಸಂಭವನೀಯತೆಯನ್ನು, ಗಾಯಗಳಿಂದ ಬಾಧಿತನಾಗಿರುವುದನ್ನು, ಕ್ಲೇಮುದಾರರು/ಕೆಲಸಗಾರರು ಭರಿಸಿದ ವೆಚ್ಚಗಳು ಸಹ ವಿವಾದಕ್ಕೆ ಗುರಿಯಾಗಿರುತ್ತದೆ. ಅದು ನಿರ್ದಿಷ್ಟವಾಗಿ ವಾಹನ ಚಾಲಕನು ವಾಹನ ಚಲಾಯಿಸುವುದಕ್ಕೆ ಸಮರ್ಥವಾದ ಮತ್ತು ಸಿಂಧುವಾದ ಚಾಲನಾ ಲೈಸೆನ್ಸ್ ಹೊಂದಿಲ್ಲದಿರುವುದನ್ನು ಆಗ್ರಹಪಡಿಸಿದ್ದಾರೆ. ಆಯುಕ್ತರು ದಾಖಲೆ ಮೇಲೆ ಮಂಡಿತವಾದ ಸಾಕ್ಷ್ಯಗಳನ್ನು ವಿವೇಚಿಸಿದಾಗ, ಕ್ಲೇಮುದಾರರಾಗಿರುವ ಕೆಲಸಗಾರರು ಅಪಘಾತಕ್ಕೆ ಒಳಗಾದ ವಾಹನದ ಮಾಲೀಕರ ನೌಕರರಾಗಿರುವುದು ಮತ್ತು ಅವರು ತಮ್ಮ ಕೆಲಸವನ್ನು ನಿರ್ವಹಿಸುತ್ತಿರುವ ಸಮಯದಲ್ಲಿ ಗಾಯಗಳಿಂದ ಬಾಧಿತರಾಗಿರುವುದು ಕಂಡು ಬಂದಿದೆ ಎಂದು ತಮ್ಮ ನಿರ್ಣಯಕ್ಕೆ ಅವಲಂಬಿತವಾಗಿ ಈ ಮುಂದಿನ ತೀರ್ಪುಗಳನ್ನು ಮಂಡಿಸಿರುವರು.

*(i) 2009 ಎಸಿಜೆ 1283ರಲ್ಲಿ ವರದಿಯಾಗಿರುವ ನ್ಯೂ ಇಂಡಿಯಾ ಅಶೂರೆನ್ಸ್ ಕಂಪನಿ ಲಿಮಿಟೆಡ್ -ವಿರುದ್ಧ- ಚಿಕ್ಕಪ್ಪಯ್ಯ.*

*(ii) 2000 ಎಸಿಜೆ 319ದಲ್ಲಿ ವರದಿಯಾಗಿರುವ ಅಶೋಕ ಗಂಗಾಧರ್ ಮರಾಠ -ವಿರುದ್ಧ- ಓರಿಯಂಟಲ್ ಇನ್‌ಶೂರೆನ್ಸ್ ಕಂಪನಿ ಲಿಮಿಟೆಡ್ ;*

(iii) *2008 3 ಸರ್ವೋಚ್ಚ ನ್ಯಾಯಾಲಯ ಮೊಕದ್ದಮೆಗಳು 464ರಲ್ಲಿ ವರದಿಯಾಗಿರುವ ನ್ಯಾಷನಲ್ ಇನ್ಸೂರೆನ್ಸ್ ಕಂ. ಲಿಮಿಟೆಡ್ – ವಿರುದ್ಧ– ಅಣ್ಣಪ್ಪ ಈರಪ್ಪ ನೆಸರ್ಗಿ ;*

(iv) *2008 8 ಸರ್ವೋಚ್ಚ ನ್ಯಾಯಾಲಯ ಮೊಕದ್ದಮೆ 253ರಲ್ಲಿ ವರದಿಯಾಗಿರುವ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂಪನಿ ಲಿಮಿಟೆಡ್ – ವಿರುದ್ಧ– ರೋಷನ್ ಬೆನ್ ರೆಹಮಾನ್ ಫಕೀರ್ ಮತ್ತು*

(v) *2004 ಎಸಿಜೆ 1ರಲ್ಲಿ ವರದಿಯಾಗಿರುವ ರಾಷ್ಟ್ರೀಯ ಇನ್ಸೂರೆನ್ಸ್ ಕಂಪನಿ ಲಿಮಿಟೆಡ್ –ವಿರುದ್ಧ– ಸ್ವರ್ಣ ಸಿಂಗ್,*

ಈ ಮೇಲಿನ ಮೊಕದ್ದಮೆಗಳ ತೀರ್ಪುಗಳನ್ನು ಅವಲಂಬಿಸಿ ಆಯುಕ್ತರು ಚಾಲಕನು ಲಘುವಾಹನಗಳನ್ನು ಚಲಾಯಿಸುವುದಕ್ಕೆ ಲೈಸೆನ್ಸ್ ಹೊಂದಿರುತ್ತಾನೆ ಮತ್ತು ಅವನಿಗೆ ಲಘು ಸಾಗಣೆ ವಾಹನಗಳನ್ನು ಸಹ ಚಲಾಯಿಸುವುದಕ್ಕೂ ಅನುಮತಿಯನ್ನು ಪಡೆದಿರುತ್ತಾನೆ ಎಂದು ನಿರ್ಣಯಿಸಿರುತ್ತಾರೆ. ಅವರು ಮುಂದುವರೆದು, ಸರಕುಗಳ ವಾಹನದಲ್ಲಿ ಜನರನ್ನು ಒಯ್ಯಲು ಅನುಮತಿಸಿರುವುದನ್ನು ನಿರ್ಣಯಿಸಿದ್ದಾರೆ ಮತ್ತು ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ, 1923 (ಸಂಕ್ಷಿಪ್ತವಾಗಿ ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮ) ಅಡಿಯಲ್ಲಿ ಕೆಲಸಗಾರರು ನಷ್ಟ ಪರಿಹಾರದ ಹಣವನ್ನು ಪಡೆಯಲು ಹಕ್ಕುಳ್ಳುವರಾಗಿರುತ್ತಾನೆಂದು ತಮ್ಮ ನಿರ್ಣಯದಲ್ಲಿ ಎತ್ತಿಹಿಡಿದಿದ್ದಾರೆ.

5. ಅಪೀಲುದಾರರ ಪರವಾಗಿ ಮಾನ್ಯ ನ್ಯಾಯವಾದಿಗಳಾದ ಶ್ರೀ ಜಿ.ಎನ್. ರಾಯಚೂರ್ ವಾದವನ್ನು ಆಲಿಸಲಾಗಿದೆ. ಪ್ರತ್ಯರ್ಜಿದಾರರಿಗೆ ನೋಟೀಸ್ ಜಾರಿಯಾಗಿದ್ದರೂ ಅವರ ಪರವಾಗಿ ಯಾರು ಪ್ರತಿನಿಧಿಸಿರುವುದಿಲ್ಲ.

6. ಆಯುಕ್ತರ ಮುಂದೆ ಚಾಲಕನು 12.07.2006 ರಿಂದ ಪ್ರಾರಂಭವಾಗಿ 20 ವರ್ಷಗಳ ಅವಧಿಗಾಗಿ ಲಘು ಮೋಟಾರು ವಾಹನ/ಸಾಗಣೆಯೇತರ ವಾಹನಗಳ ಚಾಲನೆಗಾಗಿ ಹೊಂದಿರುವ ಚಾಲನಾ ಲೈಸೆನ್ಸ್‌ಅನ್ನು ಸುಸ್ಥಾಪಿಸಿರುತ್ತಾನೆ. ಇಲ್ಲಿನ ಸನ್ನಿವೇಶಗಳಲ್ಲಿ ಚಾಲಕನು ಹೊಂದಿರುವ ಲೈಸೆನ್ಸು ಲಘು ಮೋಟಾರು ವಾಹನ ಸಂಬಂಧದಲ್ಲಿ ಭಾರ ಹೇರದ ಸಾಗಣೆ ವಾಹನ 7,500 ಕೆ.ಜಿ. ಗಳಿಗಿಂತ ಕಡಿಮೆ ತೂಕವಿರುವ ಸಾಗಣೆ ವಾಹನದ ಸಂಬಂಧದಲ್ಲಿ ಚಾಲಕನ ಚಾಲನಾ ಲೈಸೆನ್ಸ್ ಸಿಂಧುವಾಗಿರುವ ಅಥವಾ ಸದರಿ ಸಾಗಣೆ ವಾಹನ ಸರಕುಗಳನ್ನು ಸಾಗಿಸದಿರುವಾಗ ಅಪಘಾತವಾಗಿರುವ ಸನ್ನಿವೇಶಗಳು ಇಲ್ಲಿ ಕಂಡು ಬರುತ್ತಿದೆ. ಇಲ್ಲಿ ಚಾಲಕನು ಹೊಂದಿರುವ ಚಾಲನಾ ಲೈಸೆನ್ಸ್ ಕಾಲಾವಧಿಯೂ ಮುಂದಿನ 20 ವರ್ಷಗಳಾಗಿರುತ್ತದೆ, ಇದನ್ನು ಕೇಂದ್ರಿಯ ಮೋಟಾರು ವಾಹನಗಳ ನಿಯಮಗಳು, 1989 (ಸಂಕ್ಷಿಪ್ತವಾಗಿ ನಿಯಮಗಳು)ಅದಕ್ಕೆ ಮಾಡಿದ 28.03.2001ರಲ್ಲಿ ಮಾಡಿದ ತಿದ್ದುಪಡಿಯೂ ಪೂರ್ವಾನ್ವಯವಾಗುತ್ತದೆ ಎಂದು ನಿರೂಪಿಸಿರುವರು. ತಿದ್ದುಪಡಿಯಾದ ತರುವಾಯ, ಅರ್ಜಿದಾರ ನಿಯಮಗಳಲ್ಲಿ 4ನೇ ನಮೂನೆಯಲ್ಲಿ ಪ್ರಾಧಿಕಾರಕ್ಕೆ ಲೈಸೆನ್ಸ್ ಕೋರಿ ಅರ್ಜಿಯನ್ನು ಸಲ್ಲಿಸಿರುವನು, ನಿಯಮಗಳ 14ನೇ ನಿಯಮದಲ್ಲಿ ತೆಗೆದು ಹಾಕಲಾದ ಒಂಭತ್ತು ಬಗೆಯ ವಾಹನಗಳ ವಿವರಗಳನ್ನು ನಿರೂಪಿಸಿದೆ. ತೆಗೆದು ಹಾಕಲಾದ ಒಂಭತ್ತು ಬಗೆಯ ವಾಹನಗಳ ಸಂಬಂಧದಲ್ಲಿ ಲೈಸೆನ್ಸ್ ಮತ್ತು ಸಾಗಣೆ ವಾಹನಗಳ ಸಂಬಂಧದಲ್ಲಿ ಲಘು ಮೋಟಾರು ವಾಹನದ ಲೈಸೆನ್ಸ್ ವಿಶಿಷ್ಟವಾಗಿದೆ ಮತ್ತು ವಿಭಿನ್ನವಾಗಿದೆ. ಈ ಲೈಸೆನ್ಸ್‌ಗಳ ಕಾಲಾವಧಿಯೂ ವಿಭಿನ್ನವಾಗಿದೆ. ಲಘು ಮೋಟಾರು ವಾಹನಗಳ ಲೈಸೆನ್ಸ್ 20 ವರ್ಷಗಳವರೆಗೂ ಚಲಾವಣೆಯಲ್ಲಿರುತ್ತದೆ. ಸಾಗಣೇತರ ವಾಹನ ಸಂಬಂಧದಲ್ಲಿ ಲೈಸೆನ್ಸ್ ಅನ್ನು ಪ್ರತಿ ಮೂರು ವರ್ಷಗಳಿಗೊಮ್ಮೆ ನವೀಕರಿಸಬೇಕಾಗುತ್ತದೆ. ಇಲ್ಲಿ ಪಡೆದಿರುವ ಲೈಸೆನ್ಸ್ ಆಗಿರಲೀ, ಸಾಗಣೇತರ ಲಘು ಮೋಟಾರು ವಾಹನವಾಗಿರಲಿ, ಸರಕುಗಳ ಸಾಗಣೆ ವಾಹನವಾಗಿರಲಿ ವಿವಾದವು ಪೂರ್ವನಿರ್ದಶನ ರಹಿತ ವಿಷಯವಾಗಿರುವುದಿಲ್ಲ. ಈ ನ್ಯಾಯಾಲಯ ಅನೇಕ ತೀರ್ಪುಗಳ ಮೂಲಕ ಲಘು ಮೋಟಾರು ವಾಹನಕ್ಕಾಗಿ ಪಡೆದ ಲೈಸೆನ್ಸ್ 750 ಕೆ.ಜಿ. ಗಳಿಗಿಂತ ಕಡಿಮೆ ಇರುವುದು ಲಘು ಮೋಟಾರು ವಾಹನದ ಭಾರವಾಗಿರುತ್ತದೆ, ಭಾರಹೇರದ ಸದರಿ ವಾಹನ ಭಾರವನ್ನು ಚಲಾಯಿಸುವುದಕ್ಕೆ ಆ ಲೈಸೆನ್ಸ್ ಸಿಂಧುವಾಗಿರುವುದಿಲ್ಲ ಎಂದು ಈ ನ್ಯಾಯಾಲಯ ಅಭಿಪ್ರಾಯ ವ್ಯಕ್ತಪಡಿಸಿದೆ.

7. ಮೂರು ಜನರಿಗೆ ಮಾತ್ರವೇ ಸ್ಥಳವಕಾಶವಿರುವ ವಾಹನದಲ್ಲಿ ವಾಹನದ ಕೆಲಸಗಾರರ ಸಂಭವನೀಯ ಅಪಾಯುವನ್ನು ಪ್ರಶ್ನಿತ ವಿಮಾಪಾಲಿಸಿ ಒಳಗೊಂಡಿರುವುದಿಲ್ಲ. ಚಾಲಕ ಅಥವಾ ಇತರ ಕೆಲಸಗಾರ ಹೊಣೆಗಾರಿಕೆಯ ವಿಮೆಯ ಕಂತುಗಳನ್ನು ಸಂಗ್ರಹ ಮಾಡಿರುವುದಿಲ್ಲ, ಸಂಗ್ರಹಿಸಿರುವುದಿಲ್ಲ. ಇಲ್ಲಿ ಕ್ಲೇಮುದಾರನಾಗಿರುವ ಚಾಲಕನ ಮೇಲೆ ಪ್ರಾಸಿಕ್ಯೂಷನ್ ಅವರು ಅಪಘಾತ ಕಾರಣಕ್ಕಾಗಿ ಚಾಲಕನ ಅತಿ ವೇಗ ಮತ್ತು ನಿರ್ಲಕ್ಷ್ಯತೆಯ ಚಾಲನೆಯಿಂದ ಅಪಘಾತ ಸಂಭವಿಸಿತೆಂದು ಆಪಾದಿಸಿರುವರು. ಮೋಟಾರು ವಾಹನಗಳ ಅಧಿನಿಯಮ (ಸಂಕ್ಷಿಪ್ತವಾಗಿ ಅಧಿನಿಯಮ)ದ 3ನೇ ಪ್ರಕರಣದ ಅಡಿಯಲ್ಲಿ ಪರಿಣಾಮಕಾರಿ ಚಾಲನಾ ಲೈಸೆನ್ಸ್ ಹೊಂದಿರುವುದು ಅತ್ಯಾವಶ್ಯವಾಗಿದೆ ಎಂದು ನಿರೂಪಿಸಿದೆ. ಸದರಿ ವಾಹನವನ್ನು ಚಲಾಯಿಸುವುದಕ್ಕೆ ನಿರ್ದಿಷ್ಟವಾಗಿ ಜಾರಿ ಮಾಡಿದ ಲೈಸೆನ್ಸ್ ಹೊರತುಪಡಿಸಿ ಯಾರೊಬ್ಬರೂ ಈ ಸಾಗಣೆ ವಾಹನವನ್ನು ಚಲಾಯಿಸಲು ಹಕ್ಕನ್ನು ಹೊಂದಿರುವುದಿಲ್ಲ. ಮೋಟಾರು ವಾಹನಗಳ ಅಧಿನಿಯಮದ 4ನೇ ಪ್ರಕರಣವು ಈ ಮೋಟಾರು ವಾಹನದ ಚಾಲನೆಗೆ ಸಂಬಂಧಿಸಿದಂತೆ ವಯಸ್ಸಿನ ನಿರ್ಬಂಧತೆಯನ್ನು ನಿರೂಪಿಸಿದೆ. ಮೋಟಾರು ವಾಹನ ಅಧಿನಿಯಮದ 5ನೇ ಪ್ರಕರಣದಲ್ಲಿ ಈ ಅಧಿನಿಯಮದ 3ನೇ ಮತ್ತು 4ನೇ ಪ್ರಕರಣದ ಉಪಬಂಧಗಳನ್ನು ತೃಪ್ತಿಕರವಾಗಿ ಹೊಂದಿಲ್ಲದ ಯಾರೇ ವ್ಯಕ್ತಿಗೆ ಮೋಟಾರು ವಾಹನವನ್ನು ಚಲಾಯಿಸುವುದಕ್ಕೆ ಅನುಮತಿಸುವ ವಾಹನದ ಮಾಲೀಕ ಅಥವಾ ವಾಹನದ ಪ್ರಭಾರ ಹೊಂದಿರುವ ವ್ಯಕ್ತಿಯೇ ಹೊಣೆಗಾರನಾಗಿರುತ್ತಾನೆಂದು ಸೂಚಿಸಿದೆ. ವಿಮಾ ಪಾಲಿಸಿಯ ಷರತ್ತುಗಳಲ್ಲಿ ಇದು ಸಹ ಒಂದಾಗಿದೆ, . . . . . ವಾಹನ ಚಲಾಯಿಸುವ ವ್ಯಕ್ತಿಯು ಅಪಘಾತ ನಡೆದ ಸಮಯದಲ್ಲಿ ಪರಿಣಾಮಕಾರಿ ಚಾಲನಾ ಲೈಸೆನ್ಸ್ ಹೊಂದಿರಬೇಕು ಮತ್ತು ಅಂಥ ಲೈಸೆನ್ಸ್ ಹೊಂದುವುದರಿಂದ ಅಥವಾ ಪಡೆದುಕೊಳ್ಳುವುದರಿಂದ ಅವನು ಅನರ್ಹನಾಗಿರಬಾರದು.

8. ತದನುಸಾರವಾಗಿ, ಚಾಲಕನು ಟೆಂಪೋ ಟ್ರಕ್ಸ್/ಸಾಗಣೆ ವಾಹನವನ್ನು ಚಲಾಯಿಸುವುದಕ್ಕೆ ಸಿಂಧುವಾದ ಮತ್ತು ಪರಿಣಾಮಕಾರಿ ಲೈಸೆನ್ಸ್ ಅನ್ನು ಹೊಂದಿಲ್ಲದಿರುವುದು ಮತ್ತು ವಾಹನದ ಮಾಲೀಕ ಮೋಟಾರು ವಾಹನ ಅಧಿನಿಯಮದ 5ನೇ ಪ್ರಕರಣವನ್ನು ಉಲ್ಲಂಘಿಸಿರುವ ಕೃತ್ಯ ಮತ್ತು ವಿಮಾ

ಪಾಲಿಸಿಯ ಅಡಿಯಲ್ಲಿನ ಕರಾರು ಷರತ್ತುಗಳನ್ನು ಉಲ್ಲಂಘಿಸಿರುವ ಕೃತ್ಯವು ಸ್ಪಷ್ಟವಾಗಿದೆ.

9. ಮೋಟಾರು ವಾಹನ ಅಧಿನಿಯಮದ 166ನೇ ಪ್ರಕರಣದ ಅಡಿಯಲ್ಲಿ ವಿಮಾಕರ್ತನ್ನು ಕ್ಲೇಮನ್ನು ವಿರೋಧಿಸುವುದಕ್ಕೆ ಪಾಲಿಸಿಯ ಷರತ್ತುಗಳ ಉಲ್ಲಂಘನೆಯೂ ಸಿಂಧೂವಾದ ಕಾರಣವಾಗಿ ಲಭ್ಯವಾಗಿದೆ. ಚಾಲಕನು ಯುಕ್ತವಾದ ಲೈಸೆನ್ಸ್ ಹೊಂದದೆ ಇರುವ ಸಂದರ್ಭದಲ್ಲಿ ಮೋಟಾರು ವಾಹನ ಅಧಿನಿಯಮದ 149(2)(ಎ)(ಐ) ಪ್ರಕರಣವು ನಿರ್ದಿಷ್ಟವಾಗಿ ಅನ್ವಯವಾಗುತ್ತದೆ, ವಿಮಾ ಕಂಪನಿ ವಾಹನದ ಮಾಲೀಕನೊಂದಿಗೆ ತನ್ನ ಕರಾರಿನ ಹೊಣೆಗಾರಿಕೆಗಳಿಂದ ಸ್ವತಃ ತನ್ನನ್ನು ತಾನೇ ರಕ್ಷಿಸಿಕೊಳ್ಳುವುದಕ್ಕೆ ಪ್ರತಿವಾದಿಯಾಗಬೇಕಾಗಿದೆ. ಅಲ್ಲದೇ ಮೋಟಾರು ವಾಹನ ಅಧಿನಿಯಮದ ಅಡಿಯಲ್ಲಿ ಸೂಚಿಸಿರುವಂತೆ ಚಾಲಕನು ಸಿಂಧುವಾದ ಮತ್ತು ಪರಿಣಾಮಕಾರಿಯಾದ ಲೈಸೆನ್ಸ್ ಹೊಂದಿಲ್ಲವೆಂಬ ಪ್ರತಿಪಾದವನ್ನು ಋಜುವಾತು ಪಡಿಸುವ ಹೊಣೆಗಾರಿಕೆಯನ್ನು ವಿಮಾಕರ್ತನು ಹೊಂದಿರುವನು. ಆದರೆ, ಸ್ವತಃ ಇಲ್ಲಿ ಚಾಲಕನೇ ಕ್ಲೇಮುದಾರನಾಗಿದ್ದಾನೆ. ನಾವು ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಚೌಕಟ್ಟಿನಲ್ಲಿ ಸದರಿ ಮೊಕದ್ದಮೆಯನ್ನು ನಿರ್ಣಯಿಸಬೇಕಾಗಿದೆ. ವ್ಯಕ್ತಿಯು ತನ್ನ ಮೊಕದ್ದಮೆ ಮತ್ತೊಂದು ಕಡೆಯಿಂದ ರುಜುವಾತಾಗುವವರೆಗೂ ಕ್ರಿಮಿನಲ್ ವಿಚಾರಣೆಯಲ್ಲಿ ಮೌನವನ್ನು ನಿರ್ವಹಿಸುವುದಕ್ಕೆ ಆಪಾದಿತ ವ್ಯಕ್ತಿಯ ಸ್ಥಾನವನ್ನು ಅವನು ತೆಗೆದುಕೊಳ್ಳಲು ಸಾಧ್ಯವಿಲ್ಲ. ವಿಮಾಕರ್ತ ಸುಸಂಗತ ಸಂದೇಹವನ್ನು ಮೀರದೆ ತನ್ನ ಅಪವಾದಗಳನ್ನು ರುಜುವಾತು ಪಡಿಸುವುದಕ್ಕೆ ಕ್ರಿಮಿನಲ್ ವಿಚಾರಣೆಯಾಗುವವರೆಗೂ ಅವನು ಹೊಣೆಗಾರನಾಗಿರುವುದಿಲ್ಲ. ಆಯುಕ್ತರ ಸಮ್ಮುಖದಲ್ಲಿ ಈ ಮೊಕದ್ದಮೆ ಬಂದಾಗ 'ಗಾಯಗಳಿಗೆ ಒಳಗಾಗಿರುವುದರಿಂದ ಅವನು ತನ್ನ ಕೆಲಸವನ್ನು ಕಳೆದುಕೊಂಡಿರುವುದು', ಟೆಂಪೋ ಟ್ರಾಕ್ಸ್ ವಾಹನ ಚಲಾಯಿಸುವುದಕ್ಕೆ ಅವನು ತ್ಯಜಿಸಿದ ಸಿಂಧುವಾದ ಲೈಸೆನ್ಸ್ ಹೊಂದಿರುವುದನ್ನು ಅವನು ರುಜುವಾತು ಪಡಿಸಬೇಕಾಗಿರುತ್ತದೆ. ಮೋಟಾರು ವಾಹನ ಅಧಿನಿಯಮದ 3 ಮತ್ತು 4ನೇ ಪ್ರಕರಣದ ಉಲ್ಲಂಘನೆ, ಮೋಟಾರು ವಾಹನ ಅಧಿನಿಯಮದ 18ನೇ ಪ್ರಕರಣದ ಅಡಿಯಲ್ಲಿ ಸಿಂಧುವಾಗಿರದ ಲೈಸೆನ್ಸ್‌ನಲ್ಲಿ ವಾಹನ ಚಲಾಯಿಸುವುದು ಅಪರಾಧವಾಗಿದೆ. ಈ ನ್ಯಾಯಾಲಯದ ಪೂರ್ಣ ನ್ಯಾಯ ಪೀಠವು,

***ಶ್ರೀಮತಿ ಕವಿತ ದಿಲೀಪ್ ಪಾಟೀಲ್ ಮತ್ತು ಇತರರು –ವಿರುದ್ಧ– ಆನಂದ ಜ್ಞಾನು ಪಾಟೀಲ್ ಮತ್ತು ಇತರರು***[1], ಮೊಕದ್ದಮೆಯಲ್ಲಿ "ಮೋಟಾರು ವಾಹನಗಳ ಅಧಿನಿಯಮದ 149(2) ನೇ ಪ್ರಕರಣದ ನಿಬಂಧನೆಗಳಲ್ಲಿ ವಿಮಾ ಕಂಪನಿಗೆ ಲಭ್ಯವಿರುವ ಪ್ರತಿವಾದಗಳ ಮೇಲೆ ನಿರ್ಬಂಧನೆಗಳು ಇದ್ದಾಗ ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ ಅಡಿಯಲ್ಲಿ ಪ್ರಕ್ರಿಯೆಯನ್ನು ನಡೆಸುವುದಕ್ಕೆ ಯಾವುದೇ ಮನವಿಯನ್ನು ಮಾಡಬಹುದೇ?" ಎಂಬ ಪ್ರಶ್ನೆಗೆ ಸಮರ್ಥವಾಗಿ ಉತ್ತರಿಸಿದೆ.

10. ಮೋಟಾರು ವಾಹನ ಅಧಿನಿಯಮದ 143, 167 ಮತ್ತು 149 ಪ್ರಕರಣವು ಒಳಗೊಂಡಂತೆ ಅದರ ವಿವಿಧ ಉಪಬಂಧಗಳನ್ನು ಪರಿಗಣಿನೆಗೆ ತೆಗೆದುಕೊಂಡು ಅದು ಈ ಮುಂದಿನಂತೆ ನಿರ್ಣಯಿಸಿದೆ:

> *"ಕೆಲಸಗಾರರ ನಷ್ಟ ಪರಿಹಾರ ಅಧಿನಿಯಮದ . . . . ಅಡಿಯಲ್ಲಿ ವಿಮಾ ಕಂಪನಿ ಪಾಲಿಸಿಯ ಯಾವುದೇ ಷರತ್ತುಗಳ ಉಲ್ಲಂಘನೆ ಮಾಡಿದ ವಾದಕ್ಕೆ ಮಾತ್ರವೇ ಕಾನೂನಿನ ಮಹತ್ವದ ಪ್ರಶ್ನೆಯನ್ನು ಎತ್ತಬಹುದಾಗಿದೆ ಮತ್ತು ಆದುದರಿಂದ ಮೋಟಾರು ವಾಹನದ 149(2)ನೇ ಪ್ರಕರಣದ ನಿಬಂಧನೆಗಳಲ್ಲಿ ಲಭ್ಯವಾಗಬಹುದಾದ ಇತರ ಪ್ರತಿವಾದಿಗಳು ಎತ್ತುವ ಪ್ರಶ್ನೆ ಇಲ್ಲಿ ಎತ್ತಲು ಸಾಧ್ಯವಾಗುವುದಿಲ್ಲ.*

ಮುಂದುವರೆದು ಅದು ತನ್ನ ನಿರ್ಣಯದಲ್ಲಿ–

> *" . . . . . .. ಆದುದರಿಂದ, ವಿಮಾಕರ್ತ ಮೋಟಾರು ವಾಹನ ಅಧಿನಿಯುಮದ 149(2)ನೇ ಪ್ರಕರಣದ ಅಡಿಯಲ್ಲಿ ತನಗೆ ಲಭ್ಯವಾಗುವ ಕಾರಣಗಳ ಹೊರತು ನಷ್ಟ ಪರಿಹಾರದ ಪ್ರಮಾಣ*

1. 2004(2) ಕರ್ನಾಟಕ ಕಾನೂನು ತೀರ್ಪು 569 (ಎಫ್‌ಬಿ)

*ಅಥವಾ ಇತರ ಕಾರಣಗಳ ಸಂಬಂಧದಲ್ಲಿ ಯಾವುದೇ ಅಪೀಲನ್ನಾಗಲೀ, ಆಕ್ಷೇಪಗಳನ್ನಾಗಲೀ ಸಲ್ಲಿಸಲು ಅವಕಾಶವಿರುವುದಿಲ್ಲ" ಎಂದು ಹೇಳಿದೆ.*

11. ಪಾಲಿಸಿಯ ಷರತ್ತನ್ನು ಉಲ್ಲಂಘಿಸಿದ ಕಾರಣದ ಮೇಲೆ ಮಾಲೀಕನು ನಷ್ಟ ಭರ್ತಿಗೆ ಹೊಣೆಗಾರನಾಗಬೇಕೆಂದು ಅಪೀಲುದಾರರು ಎತ್ತಿರುವ ಪ್ರಶ್ನೆಯು ಸರಿಯಾಗಿರುತ್ತದೆ. ಪಾಲಿಸಿಯಲ್ಲಿ ಸಂಭವನೀಯ ಅಪಾಯವನ್ನು ಒಳಗೊಂಡಿರುವ ಕೆಲಸಗಾರ ಇಲ್ಲಿ ಮೂರನೇ ಪಕ್ಷಕಾರನಲ್ಲ. ಒಂದನೆಯದಾಗಿ, ಪಾಲಿಸಿ ಷರತ್ತುಗಳ ಉಲ್ಲಂಘನೆ, ಮತ್ತು ಎರಡನೆಯದಾಗಿ, ಚಾಲಕ ಮತ್ತು ನೌಕರನ ಸಂಬಂಧದಲ್ಲಿ ಕಂತುಗಳನ್ನು ಸಂಗ್ರಹಿಸಿರುವುದಿಲ್ಲ. ಈ ಕಾರಣಗಳಿಂದ ಅಪೀಲುದಾರ ಇಬ್ಬರ ನಷ್ಟ ಪರಿಹಾರವನ್ನು ನೀಡುವುದಕ್ಕೆ ಹೊಣೆಗಾರನಾಗಿರುವುದಿಲ್ಲ.

12. ಮೇಲಿನ ಚರ್ಚೆಗೆ ಅನುಗುಣವಾಗಿ, ಎರಡು ಅಪೀಲುಗಳನ್ನು ಪುರಸ್ಕರಿಸಲಾಗಿದೆ. ಅಪೀಲುದಾರ–ವಿಮಾಕರ್ತನನ್ನು ಎರಡೂ ಅಪೀಲುಗಳಲ್ಲಿ ಕ್ಲೇಮುದಾರರಿಗೆ ನಷ್ಟ ಪರಿಹಾರವನ್ನು ಸಂದಾಯ ಮಾಡುವುದಕ್ಕೆ ವಿಮಾ ಒಪ್ಪಂದದ ಅಡಿಯಲ್ಲಿ ಹೊಣೆಯಾಗಿರುವುದರಿಂದ ಮುಕ್ತಗೊಳಿಸಲಾಗಿದೆ.